**ಅಸಲು ದಾವಾ ನಂಃ 117/2022**
**ಪಿ.ಡಬ್ಲ್ಯೂಃ 1 ,**

<u>ದಿನಾಂಕ :26-10-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಪಾಟಿ ಸವಾಲು :- ಶ್ರೀ ಬಿ.ಎಸ್.ಬಿ. ಪ್ರತಿವಾದಿ ಪರ ವಕೀಲರಿಂದ :</u>

ನನ್ನ ಗಂಡನಿಗೆ ಇಬ್ಬರು ಅಣ್ಣ ತಮ್ಮಂದಿರು. ನನ್ನ ಗಂಡ ಈಗ ಮುಂಬೈಯಲ್ಲಿ ಇದ್ದಾರೆ. ನನ್ನ ಗಂಡ ಖಾಸಗಿ ಕೆಲಸ ಮಾಡುತ್ತಾನೆ. ಅವರಿಗೆ ರೂ.10,000/- ಸಂಬಳ ಇದೆ. ಮುಂಬೈಯಲ್ಲಿ ನಮ್ಮ ಸ್ವಂತ ಮನೆ ಇದೆ. ಸದರಿ ಮನೆ ನನ್ನ ಗಂಡನ ತಂದೆ ಖರಿದಿಸಿದ್ದಾರೆ. ಸದರಿ ಮನೆ 50-60 ವರ್ಷಗಳ ಮೇಲ್ಪಟ್ಟು ಇದೆ. ಮುಂಬೈಯಲ್ಲಿ ನಮಗೆ ಒಂದು ಸ್ವಂತ ಮನೆ ಇದೆ ಎಂದರೆ ಸರಿಯಲ್ಲ. 2009-10 ರಲ್ಲಿ ರಾಜೇಶ್ರೀ ಕಂಪನಿಯವರು ನಮ್ಮ ತಾಯಿಯ ಜಮೀನು ಸ್ವಾಧೀನ ಪಡಿಸಿಕೊಂಡಿದ್ದು, ಅದರಿಂದ ಬಂದ ಹಣದಿಂದ ನಮ್ಮ ತಾಯಿ ಮುಂಬೈಯಲ್ಲಿ ಒಂದು ಜಾಗ ಖರಿದಿಸಲು ರೂ.10,00,000/- ಹಣ ನೀಡಿದ್ದಾರೆ ಎಂದರೆ ಸರಿಯಲ್ಲ . ನನ್ನ ಮಾವನ 2 ಎಕರೆ ಜಮೀನನ್ನು ರಾಜೇಶ್ರೀ ಕಂಪನಿಯವರು ಸ್ವಾಧೀನ ಪಡಿಸಿಕೊಂಡಿದ್ದಾರೆ ಎಂದರೆ ಸರಿ. ನಮ್ ಮಾವನವರು ಅದರಿಂದ ಬಂದ ಹಣವನ್ನು ಎಲ್ಲರಿಗೂ ಸಮನಾಗಿ ಹಂಚಿರುತ್ತಾರೆ ಎಂದರೆ ಸರಿ. ಅದೇ ಸಮಯದಲ್ಲಿ ನನ್ನ ತಾಯಿ ಹೆಸರಿನಲ್ಲಿದ್ದ ಜಮೀನನ್ನು ರಾಜೇಶ್ರೀ ಕಂಪನಿಯವರು ಸ್ವಾಧೀನ ಪಡಿಸಿಕೊಂಡಿದ್ದಾರೆ ಎಂದರೆ ಸರಿ. ಆ ಸಮಯದಲ್ಲಿ ನನ್ನ ತಾಯಿ ನಮ್ಮ ಹಿಸ್ಸೆಗೆ ಬಂದ ಹಣ ನಮಗೂ ನೀಡಿದ್ದಾರೆ ಎಂದರೆ ಸರಿಯಲ್ಲ. ನಮ್ಮ ತಂದೆ ಕಡೆಯಿಂದ ಯಾವುದೇ ಆಸ್ತಿ ಇಲ್ಲಾ ಎಂದರೆ ಸರಿ, ನಮ್ಮ ತಾಯಿ ಕಡೆಯಿಂದ ಆಸ್ತಿ ಇದೆ ಎಂದರೆ ಸರಿ. ಕೊಡುವ ತೊಗಳುವ ವ್ಯವಹಾರವನ್ನು ನಮ್ಮ ತಾಯಿಯೇ ಮಾಡುತ್ತಾರೆ ಎಂದರೆ ಸರಿ. 1 ಮತ್ತು 2 ಪ್ರತಿವಾದಿ ಮದುವೆ ಆಗಿ ಬೇರೆ ಬೇರೆ ವಾಸ ಇದ್ದಾರೆ ಎಂದರೆ ಸರಿ.

ನನ್ನ ತಂದೆ ಮುಂಬೈಯಲ್ಲಿ ವಾಸ ಇದ್ದರು. ನನ್ನ ತಂದೆ ಮುಂಬೈಯಲ್ಲಿ ವಾಚಮೆನ್ ಕೆಲಸ ಮಾಡುತ್ತಿದ್ದರು. ಆ ಸಮಯದಲ್ಲಿ ನನ್ನ ತಂದೆಗೆ ರೂ.10,000/- ಸಂಬಳ ಇತ್ತು. ಸಾಕ್ಷಿ ಮುಂದುವರೆದು ನಮ್ಮ ತಂದಗೆ ರೂ.2,000/- ಸಂಬಳ ನೀಡುತ್ತಿದ್ದರು ಎಂದು ನುಡಿಯುತ್ತಾರೆ. ನಮ್ಮ ತಂದೆ 1 ಮತ್ತು 2

**ಅಸಲು ದಾವಾ ನಂಃ 117/2022**
**ಪಿ.ಡಬ್ಲ್ಯೂಃ 1 ,**

ಪ್ರತಿವಾದಿ ಹೆಸರಿನ ಮೇಲೆ ಜಮೀನು ಖರಿದಿಸಿದ್ದಾರೆ ಆದರೆ ಸರ್ವೆ ನಂಬರ ಗೊತ್ತಿಲ್ಲಾ. ಸದರಿ ಜಮೀನನ್ನು ಎಷ್ಟು ಹಣಕ್ಕೆ ಮತ್ತು ಯಾರಿಂದ ಯಾವ ವರ್ಷದಲ್ಲಿ ಖರಿಸಿದ್ದಾರೆ ಎಂದು ಗೊತ್ತಿಲ್ಲಾ. ಪ್ರತಿವಾದಿ ನಂ-1 ಮತ್ತು 2 ಅವರು ಪ್ರಾಪ್ತ ವಯಸ್ಕರಾದ ನಂತರ ಸ್ವಂತ ದುಡಿಮೆಯಿಂದ ಸ.ನ. 939 ಖರಿದಿಸಿದ್ದಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿ ಪ್ರತಿವಾದಿ ನಂ1 ಮತ್ತು 2 ರವರ ಸ್ವಂತ ಆಸ್ತಿ ನನಗೆ ಅದರಲ್ಲಿ ಯಾವುದೇ ಪಾಲು ಇಲ್ಲಾ ಎಂದರೆ ಸರಿಯಲ್ಲ . ಸದರಿ ಅವರ ಆಸ್ತಿಯನ್ನು ಪ್ರತಿವಾದಿ ನಂ-1 ಮತ್ತು 2 ಖರಿದಿ ಮಾಡಿದ ನಂತರ ಅವರ ಹೆಸರು ಪಹಣಿಯಲ್ಲಿದೆ ಎಂದರೆ ಸರಿಯಲ್ಲ.

( ಈ ಹಂತದಲ್ಲಿ ವಾದಿ ಪರ ವಕೀಲರು ಹೆಚ್ಚಿನ ಪಾಟಿ ಸವಾಲಿಗಾಗಿ ಸಮಯ ಕೋರಿದ್ದು ಮುಂದುಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು
**ಚಿತ್ತಾಪೂರ.**